Download (GetImages.ashx?fn=http://indiamediamonitor.in/2021/10/24/Bengaluru/thumbnail/eb1b434b-5519-4071-bc84-3d8c01fd0f7fthumbnail.jpg)

# ಭಾರತ ಇನ್ನು ಎಲೆಕ್ಟ್ರಿಕ್ ಉತ್ಪಾದನಾ ಹಬ್

**ಬೆಂಗಳೂರು:** ಭಾರತವು ಎಲೆಕ್ಟ್ರಿಕ್ ಉತ್ಪಾದನಾ ಹಬ್ ಆಗುವತ್ತ ಮಹತ್ವದ ಹೆಜ್ಜೆ ಇರಿಸಿದೆ ಎಂದು ಕೇಂದ್ರದ ಐಟಿ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದರು.

ಭಾರತ ಎಲೆಕ್ಟ್ರಾನಿಕ್ ಉತ್ಪಾದನಾ ಹಬ್ ಆಗಲು ಮತ್ತು ಜಾಗತಿಕ ಮೌಲ್ಯಯುತವಾದ ಜಾಲದ ವಿಶ್ವಾಸಾರ್ಹವಾದ ದೇಶವಾಗಲು ಮಹತ್ವಾಕಾಂಕ್ಷೆಗಳನ್ನು ಹೊಂದಿದ್ದು ಇದಕ್ಕಾಗಿ ಅಗತ್ಯವಿರುವ ಪರಿಸರ ವ್ಯವಸ್ಥೆಯನ್ನು ರಚಿಸುವತ್ತ ಕಾರ್ಯನಿರತವಾಗಿದೆ ಎಂದು ತಿಳಿಸಿದರು.

ಪುನರ್ ಕಲ್ಪನೆ. ರೀಬೂಟ್, ಸುಧಾರಣೆ ಎಂಬ ವಿಷಯದ ಮೇಲೆ ಪಬ್ಲಿಕ್ ಅಫೇರ್ಸ್ ಫೋರಂ ಆಫ್ ಇಂಡಿಯಾ (ಪಿಎಎಫ್ಐ) ಏರ್ಪಡಿಸಿದ್ದ 8ನೇ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪಾಲ್ಗೊಂಡು ಮಾತನಾಡಿದ ಅವರು, 2014–15ರಲ್ಲಿ ನಮ್ಮ ದೇಶದಲ್ಲಿ 1.8 ಲಕ್ಷ ಕೋಟಿ ಮೌಲ್ಯದ ಎಲೆಕ್ಟ್ರಾನಿಕ್ ಉತ್ಪಾದನೆ ಇತ್ತು. ಡುಂಜೋ, ಸ್ವಿಗ್ಗಿ ಹೆಸರಿನಲ್ಲಿ ಮಾದಕವಸ್ತು ಮನೆ ಬಾಗಿಲಿಗೆ ರವಾನೆ ನಂತರದ ಐದು ವರ್ಷಗಳಲ್ಲಿ ಇದರ ಪ್ರಮಾಣ 5.5 ಲಕ್ಷ ಕೋಟಿ ರೂ.ಗಳಿಗೆ ತಲುಪಿತು. ನಾವು ನಿಖರವಾದ ನೀತಿಗಳನ್ನು ರೂಪಿಸಿರುವುದು ಮತ್ತು ಗುರಿಯನ್ನು ಇಟ್ಟುಕೊಂಡು ನೀತಿಗಳನ್ನು ರೂಪಿಸುವ ಮೂಲಕ ಬೆಳವಣಿಗೆಯನ್ನು ಕಂಡಿದ್ದೇವೆ ಎಂದರು.